**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>**

ಸಿ.ಸಿ. ನಂಃ 1533/2022 ಸಿಡಬ್ಲೂ: 1 ಪಿಡಬ್ಲೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 30-07-2025

ಹೆಸರು : ಮಲ್ಲಪ್ಪ

ತಂದೆ ಹೆಸರು : ಶಿವರಾಯ ಪೂಜಾರಿ

ವಯಸ್ಸು : 55 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಹಂಗನಳ್ಳಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 4 ನನ್ನ ಮಗ. ಚಾ ಸಾ 5 ಮತ್ತು 6 ರವರು ನಮ್ಮ ಊರಿನವರು. 1 ನೇ ಆರೋಪಿ ನನ್ನ ಅಣ್ಣ. 2 ನೇ ಆರೋಪಿ ನನ್ನ ಅಣ್ಣನ ಮಗ. ಸುಮಾರು 3 ವರ್ಷಗಳ ಹಿಂದೆ ನನ್ನ ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು. ಹೊಲಗಳಲ್ಲಿ ಎತ್ತು ತಿರುಗಿ ಹೋಗಬಾರದು ಅಂತಾ ಜಗಳ ಆಗಿತ್ತು. ನಾನು ಘಟನೆ ನಡೆದ ದಿನ ನಮ್ಮ ಹೊಲಕ್ಕೆ ಹೋಗುವಾಗ ಆರೋಪಿತನು ನಮ್ಮ ಹೊಲಕ್ಕೆಹೋಗಲು ದಾರಿ ಬಿಡುವುದಿಲ್ಲ ಅಂತಾ ಹೇಳಿದಕ್ಕೆ ನಾನು ಮರಳಿ ಮನೆಗೆ ಬಂದಿದ್ದೆವು.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆದರೇ ನಿಪಿ-1 ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿಃ21-07-2022 ರಂದು ಬೆಳಿಗ್ಗೆ 10-00 ಗಂಟೆ ಸುಮಾರಿಗೆ ನಾನು ಜಾಕನಳ್ಳಿ ರವರ ಮನೆಯ ಹತ್ತಿರ ರೋಡಿನ ಮೇಲೆ ನಡೆದುಕೊಂಡು ಹೋಗುವಾಗ ನನ್ನ ಅಣ್ಣನಾದ 1 ನೇ ಆರೋಪಿತನು ಹಾಗೂ ಅಣ್ಣನ ಮಗನಾದ 2ನೇ ಆರೋೀಪಿತನು ನನಗೆ ತಡೆದು ನಿಲ್ಲಿಸಿ ಹೊಲಕ್ಕೆ

ಹೋಗಲು ದಾರಿ ಬಿಟ್ಟಿರುವುದಿಲ್ಲ ಅಂತಾ ಹೇಳಿ 2 ನೇ ಆರೋಪಿತನು ನನಗೆ ಹಿಡಿದುಕೊಂಡಾಗ 1 ನೇ ಆರೋಪಿತನು ನನಗೆ ಒಂದು ಕಟ್ಟಿಗೆ ಯಿಂದ ಬೆನ್ನಿನ ಮೇಲೆ ಹೊಡೆದಿರುತ್ತಾನೆ ಎಂದರೆ ಸರಿ. ಅದೇ ರೀತಿ 2 ನೇ ಆರೋಪಿತನು ಸಹ ಕೈಯಿಂದ ನನ್ನ ಹೊಟ್ಟೆಗೆ ಹೋಡೆದು ಗುಪ್ತ ಪೆಟ್ಟು ಪಡಿಸಿದನು ಎಂದರೆ ಸರಿ. ನಾನು ಚೀರಾಡುವಾಗ ಚಾ ಸಾ 5 ಮತ್ತು 6 ರವರು ಬಂದದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಜಗಳ ಬಿಟ್ಟು ಹೋಗುವಾಗ ಆರೋಪಿತರು ನನಗೆ ಜೀವ ಬೆದರಿಕೆ ಹಾಕಿದರು ಎಂದರೆ ಸರಿ . ಸಾಕ್ಷಿಗೆ ಒಂದು ಸರ್ಕಾರಿ ಜಾಲಿ ಕಟ್ಟಿಗೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎಸ್ ಆರ್ ಎಚ್ ವಕೀಲರಿಂದ:

ನನಗೆ ಹಾಗೂ ಆರೋಪಿತರಿಗೆ ಹೋಲಕ್ಕೆ ಹೋಗಲು ಒಂದೇ ದಾರಿ ಇದೆ ಎಂದರೆ ಸರಿ. ನನ್ನ ಹೊಲದ ಸರ್ವೆ ನಂಬರು ನನಗೆ ಹೇಳಲು ಗೊತ್ತಿಲ್ಲ ನನ್ನ ಮಗನಿಗೆ ಗೊತ್ತಿದೆ. ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ಮೌಖಿಕವಾಗಿ ನೀಡಿರುತ್ತೇನೆ. ನಿ ಪಿ 1 ರಲ್ಲಿರುವ ವಿಷಯಗಳು ನನಗೆ ಓದಲು ಬರುವುದಿಲ್ಲ. ಮು ಮಾ 1 ರಲ್ಲಿರುವ ಕಟ್ಟಿಗೆ ಸಾಮಾನ್ಯವಾಗಿ ಎಲ್ಲಾಕಡೆ ಲಭ್ಯ ಇದೆ ಎಂದರೆ ಸರಿ. ಸರ್ವ ಸಮಾನ್ಯವಾಗಿ ಹೊಲಕ್ಕೆ ಹೋಗಲು ಒಂದೇ ರಸ್ತೆ ಇರುತ್ತದೆ ಎಂದರೆ ಸರಿ. ನಾನು ಘಟನೆ ನಡೆದ ದಿನ ಎಲ್ಲೂ ಹೋಗುತ್ತಿರಲಿಲ್ಲ. ಆರೋಪಿತರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ನನಗೆ ಯಾವ ದಿನಾಂಕದಂದು ಜಗಳ ಆಗಿತ್ತು ಹೇಳಲು ಬರುವುದಿಲ್ಲ. ಯಾವುದೇ ಘಟನೆ ಆಗದೆ ಇದ್ದರೂ ಸಹ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**